
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ಜೂನ್ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30–00 ಸಂಚಿಕೆ : 06 ಪ್ರಕಟಣೆ : 25-06-2023

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಮಂಗಳೂರಿನ ಪ್ರಖ್ಯಾತ ಕಟ್ಟಡ ನಿರ್ಮಾಣ ಸಂಸ್ಥೆ 'ಲ್ಯಾಂಡ್ ಟ್ರೇಡ್ಸ್' ಮ್ಹಾಲಕರಾದ ಶ್ರೀ ಶ್ರೀನಾಥ್ ಹೆಬ್ಬಾರ್ ಕಬ್ಬಿನಾಲೆ ಅವರು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000** (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆಯನ್ನು ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್



ಫಲಿಮಾರಿನ ಪ್ರಸಿದ್ಧ ಜ್ಯೋತಿಷ್ಯರಾದ ಶ್ರೀ ಕೆ. ವಿ. ರಾವ್ ಮತ್ತು ಶ್ರೀಮತಿ ವನಮಾಲ ದಂಪತಿಗಳು ತಮ್ಮ ಮಾತಾಪಿತರಾದ ಕಟ್ಟೆ ಶ್ರೀ ಕೃಷ್ಣಯ್ಯ ಮತ್ತು ಶ್ರೀಮತಿ ಪಾರ್ವತಿಯಮ್ಮನವರ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000** (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್



ಬೆಂಗಳೂರು ನಿವಾಸಿ ಡಾ| ಯು. ಸುಧಾಕರ್ ರಾವ್ ತಮ್ಮ ಮಾತಾಪಿತರಾದ ಶ್ರೀ ಯು. ಜನಾರ್ದನಯ್ಯ ಮತ್ತು ಶ್ರೀಮತಿ ಯು. ನಾಗಮ್ಮ ಸ್ಮರಣಾರ್ಥ ₹ **70,000** ಮತ್ತು ಅವರ ಮೊಮ್ಮಗಳಾದ ಅಮೇರಿಕಾ ನಿವಾಸಿ ಶ್ರೀಮತಿ ಮಾಲಿನಿ ವಿದ್ಯಾರಣ್ಯ ₹ **1,00,000** (ರೂಪ್ಯಾ ಒಂದು ಲಕ್ಷ) ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆಯನ್ನು ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಅಮೇರಿಕಾ ನಿವಾಸಿ ಶ್ರೀಮತಿ ಮಾಲಿನಿ ವಿದ್ಯಾರಣ್ಯ ತಮ್ಮ ಮಾತಾಪಿತರಾದ ಡಾ| ಯು. ಲಕ್ಷ್ಮೀನಾರಾಯಣ ರಾವ್ ಮತ್ತು ಶ್ರೀಮತಿ ಪ್ರೇಮಲತಾ ಯು. ಎಲ್. ರಾವ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000** (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಅಲ್ಲದೆ ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆಯನ್ನು ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಮಂಗಳೂರು ನಿವಾಸಿ ಶಾಂಕರತತ್ವ ಅಭಿಯಾನಂ ದ. ಕ. ಜಿಲ್ಲಾ ಸಂಚಾಲಕರಾದ ಶ್ರೀ ಶ್ರೀಧರ ಶಾಸ್ತ್ರೀ ಮತ್ತು ಶ್ರೀಮತಿ ಶಾರದಾ ಶಾಸ್ತ್ರೀ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,10,000** (ರೂಪ್ಯಾ ಒಂದು ಲಕ್ಷದ ಹತ್ತು ಸಾವಿರ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾ ಉಪಾಧ್ಯಕ್ಷರುಗಳಾದ ಡಾ ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀ ಸಂಜಯ್ ಕುಮಾರ್ ಪಿ., ಶ್ರೀ ಉದಯ ಕುಮಾರ್ ಪಿ., ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್, ಶ್ರೀಮತಿ ಸ್ನೇಹಲತಾ ದಿವಾಕರ್ ಉಪಸ್ಥಿತರಿದ್ದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :

ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696

ಸಂಪಾದಕರು : ಪಿ. ಶ್ರೀಕಾಂತ ರಾವ್ – 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು

• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

: 7795116598 ✆ : 9343361618

e-mail : jnanashakthisss@gmail.com


## ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

*'ಶಿವಸದನ' ವಸತಿ ನಿಲಯವು ಸುಮಾರು ರೂ. 5 ಕೋಟಿಗಳ ಯೋಜನೆ ಆಗಿದ್ದು, ದಾನಿಗಳಿಂದ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ದಾನಿಗಳು ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 40ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ.*

**ಶ್ರೀ ಕರುಣ್ ರಾವ್ ಬೆಳ್ಳೆ 7337634359 ❖ ಶ್ರೀ ಪಿ. ಶ್ರೀಕಾಂತ್ ರಾವ್ 7795116598**

## ಲಯನ್ M.J.F. ಹರ್ಷಕುಮಾರ್ ಕೇದಗೆ ಮತ್ತು ಕನಕವಲ್ಲಿ ಎಚ್. ಕೇದಗೆ ದಂಪತಿಗಳಿಗೆ 'Gold Award' ಪ್ರಶಸ್ತಿ ಪ್ರದಾನ



ದಿನಾಂಕ 10–6–2023ನೇ ಶನಿವಾರ ಸಕಲೇಶಪುರದ 'ಬಂಟರ ಭವನ'ದಲ್ಲಿ ಜರಗಿದ 'ಲಯನ್ಸ್ ಪ್ರಶಸ್ತಿ ಪ್ರದಾನ' – ಕೃತಜ್ಞತಾ ಸಮಾರಂಭದಲ್ಲಿ ದಕ್ಷಿಣ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳನ್ನೊಳಗೊಂಡ ಲಯನ್ಸ್ ಜಿಲ್ಲೆ 371-D' ಅಂತಾರಾಷ್ಟ್ರೀಯ ಸೇವಾ ಸಂಸ್ಥೆ ಇದರಲ್ಲಿ ಲಯನ್ M.J.F. ಹರ್ಷಕುಮಾರ್ ಕೇದಗೆ ಮತ್ತು ಕನಕವಲ್ಲಿ ಎಚ್. ಕೇದಗೆ ದಂಪತಿಗಳಿಗೆ ಜಿಲ್ಲಾ ಗವರ್ನರ್ ಸಂಜಿತ್ ದಂಪತಿಗಳು ನೂರಾರು ಜನರ ಕರತಾಡನದೊಂದಿಗೆ 'Gold Award'ನ್ನು ನೀಡಿ ಗೌರವಿಸಿದರು. 38 ವರುಷಗಳಿಂದ 'ಲಯನ್ಸ್' ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯ ಸದಸ್ಯರಾಗಿದ್ದು ಹಲವಾರು ಸೇವಾ ಕಾರ್ಯಗಳನ್ನು ಮಾಡಿ ಈ ಪ್ರಶಸ್ತಿಗೆ ಭಾಜನರಾಗಿರುತ್ತಾರೆ ಎಂದು ಶ್ಲಾಘಿಸಿದರು.

# ಅತ್ಯಾಕರ್ಷಕ ವಾಸ್ತು ವೈಭವದ ಅತ್ಯಾಧುನಿಕ ನಿರ್ಮಾಣ ಲ್ಯಾಂಡ್ ಟ್ರೇಡ್ಸ್ 'ನಕ್ಷತ್ರ' ವಸತಿ ಸಮುಚ್ಚಯ ಲೋಕಾರ್ಪಣೆ

ಜೂನ್ 8ರಂದು ಲ್ಯಾಂಡ್ ಟ್ರೇಡ್ ಸಂಸ್ಥೆಯವರು ಮಣ್ಣಗುಡ್ಡ ಗಾಂಧೀನಗರದಲ್ಲಿ ನಿರ್ಮಿಸಿದ ಅತ್ಯಾಕರ್ಷಕ ವಾಸ್ತು ವೈಭವದ ಹಾಗೂ ಅತ್ಯಾಧುನಿಕ ಶೈಲಿ, ಸೌಲಭ್ಯಗಳ 15 ಅಂತಸ್ತುಗಳ 'ನಕ್ಷತ್ರ' ಅಪಾರ್ಟ್‌ಮೆಂಟ್ ಗುರುವಾರ ಆರಂಭಗೊಂಡಿದೆ.

ಸಮಾರಂಭವನ್ನು ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಕೆ. ಹರೀಶ್ ಕುಮಾರ್ ಮಾತನಾಡಿ, 3 ದಶಕಗಳ ಹಿಂದೆ ಕೇವಲ ಮುಂಬಯಿಯಲ್ಲಷ್ಟೇ ಅಪಾರ್ಟ್‌ಮೆಂಟ್‌ಗಳು ಇದ್ದವು. ಈಗ ಮಂಗಳೂರು ಕೂಡ ದೊಡ್ಡ ಸಂಖ್ಯೆಯಲ್ಲಿ ಅಪಾರ್ಟ್‌ಮೆಂಟ್ಸ್‌ಗಳ ತಾಣವಾಗಿದೆ. ಪ್ರತಿಷ್ಠಿತ ಲ್ಯಾಂಡ್‌ಟ್ರೇಡ್ಸ್ ಸಂಸ್ಥೆಯ ಮ್ಹಾಲಕ ಶ್ರೀನಾಥ ಹೆಬ್ಬಾರ್ ತಮ್ಮ ಪ್ರತೀ ನಿರ್ಮಾಣದಲ್ಲೂ ವಿಶೇಷ ಕಾಳಜಿ ವಹಿಸುತ್ತಿರುವುದು ಅಭಿನಂದನೀಯ ಎಂದರು.

**ಮೇಯರ್ ಶ್ಲಾಘನೆ :** ಮುಖ್ಯ ಅತಿಥಿಯಾಗಿದ್ದ ಮಹಾನಗರ ಪಾಲಿಕೆ ಮೇಯರ್ ಜಯಾನಂದ ಅಂಚನ್ ಮಾತನಾಡಿ, ನಕ್ಷತ್ರದಂತಹ ವಾಸ್ತುವೈಭವದ ವಸತಿ ಸಮುಚ್ಚಯಗಳ ಮೂಲಕ ಶ್ರೀನಾಥ ಹೆಬ್ಬಾರ್ ಮನೆಮಾತಾಗಿದ್ದಾರೆ. ಇವರ ಕಾರ್ಯಕ್ಕೆ ರಾಜ್ಯೋತ್ಸವ ಪ್ರಶಸ್ತಿ ಸಿಗಲಿ ಎಂದು ಹಾರೈಸಿದರು. ಮುಂದಿನ ದಿನಗಳಲ್ಲಿ ನಗರದಿಂದ ಸ್ವಲ್ಪ ಹೊರಗಾದರೂ ಬಡವರಿಗೂ ಆಗುವಂಥ ಕಡಿಮೆ ವೆಚ್ಚದ ಮನೆ ನಿರ್ಮಿಸಲಿ ಎಂದು ಅಂಚನ್ ಹೇಳಿದರು.

ಆರೆಸ್ಸೆಸ್ ಪ್ರಾಂತ ಸಹಕಾರ್ಯವಾಹಕ ಪಿ. ಎಸ್. ಪ್ರಕಾಶ್ ಮಾತನಾಡಿ, ಪುಟ್ಟ ನಗರವಾಗಿದ್ದು, ದೇಶದಲ್ಲೇ ಗುರುತಿಸಿಕೊಂಡ ಮಂಗಳೂರಿನ ಪ್ರಗತಿಯಲ್ಲಿ ಹಲವು ಬಿಲ್ಡರ್‌ಗಳ ಕೊಡುಗೆ ಇದೆ. ಇದರಲ್ಲಿ 'ಲ್ಯಾಂಡ್ ಟ್ರೇಡ್ಸ್' ಮುಂಚೂಣಿಯ ಹೆಸರು. ಶ್ರೀನಾಥ್ ಹೆಬ್ಬಾರ್ ಅವರ ಪರಿಶ್ರಮ ಪ್ರತಿ ಹಂತದಲ್ಲೂ ಕಾಣುತ್ತದೆ. ಈ ಕ್ಷೇತ್ರವು 10 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿದೆ ಎಂದರು. ಕರ್ಣಾಟಕ ಬ್ಯಾಂಕಿನ ಮಹಾಪ್ರಬಂಧಕ ಶ್ರೀ ರವಿಚಂದ್ರನ್ ಎಸ್. ಮಾತನಾಡಿ, ಲ್ಯಾಂಡ್ ಟ್ರೇಡ್ಸ್ ಹೆಸರಿನಿಂದಲೇ ತ್ವರಿತವಾಗಿ ಅಪಾರ್ಟ್‌ಮೆಂಟ್‌ಗಳು ಮಾರಾಟವಾಗುತ್ತವೆ. ಕರ್ಣಾಟಕ ಬ್ಯಾಂಕ್ ಮತ್ತು ಲ್ಯಾಂಡ್ ಟ್ರೇಡ್ಸ್‌ನದ್ದು ಮೂರು ದಶಕಗಳ ಸಂಬಂಧ. 1986ರ ಹೊತ್ತಿಗೆ ಮಂಗಳೂರಿನಲ್ಲಿ ಅಪಾರ್ಟ್‌ಮೆಂಟ್ ಮಾದರಿ ಹೆಚ್ಚು ಪ್ರಚಲಿತದಲ್ಲಿರಲಿಲ್ಲ. ಲ್ಯಾಂಡ್ ಟ್ರೇಡ್ಸ್‌ನಂತಹ ಸಂಸ್ಥೆಗಳ ವಸತಿ ಸಮುಚ್ಚಯಗಳು ಈ ಕ್ಷೇತ್ರವನ್ನು ಜನಪ್ರಿಯಗೊಳಿಸಿವೆ ಎಂದರು.



**ಆಧುನಿಕ ಜೀವನ ಶೈಲಿಗೆ ಸೂಕ್ತ : ನಗರದ ವಿಶಿಷ್ಟ – ಆಧುನಿಕ ಜೀವನಶೈಲಿಗೆ ಹೊಂದಿಕೆಯಾಗುವ ನಕ್ಷತ್ರ ಅಪಾರ್ಟ್‌ಮೆಂಟ್ 4–3–2 ಬೆಡ್‌ರೂಮ್‌ಗಳ ಒಟ್ಟು 52 ಫ್ಲ್ಯಾಟ್‌ಗಳನ್ನು ಹೊಂದಿದೆ. 2020ರಲ್ಲಿ ಭೂಮಿಪೂಜೆಯಾಗಿ ದಾಖಲೆಯ 30 ತಿಂಗಳ ಅವಧಿಯಲ್ಲಿ ಪೂರ್ಣಗೊಂಡಿದೆ. ನಕ್ಷತ್ರವೂ ಸಂದರ್ಶಕರನ್ನು ಆಕರ್ಷಕವಾದ ಲ್ಯಾಂಡ್‌ಸ್ಕೇಪ್ ಮೂಲಕ ಸ್ವಾಗತಿಸುತ್ತದೆ. ಅತ್ಯಾಧುನಿಕ ವಿಸಿಟರ್ಸ್ ಲಾಬಿ, ಹೈಸ್ಪೀಡ್ ಲಿಫ್ಟ್ ಹೊಂದಿದ್ದು, ರೂಫ್‌ಟಾಪ್ ಟೆರೇಸ್ ಸಾಮುದಾಯಿಕ ಸ್ವರೂಪದ್ದಾಗಿದ್ದು, ನಿವಾಸಿಗಳ ಸಮಾರಂಭ, ಶುಭಕಾರ್ಯಗಳನ್ನು ಮಾಡಬಹುದು. ಕೆಳ ಅಂತಸ್ತಿನಲ್ಲಿ ಮೂರು ಹಂತದ ಕಾರು ಪಾರ್ಕಿಂಗ್ ಸೌಲಭ್ಯವಿದೆ. ಹೆವಿ ಡ್ಯೂಟಿ ಬ್ಯಾಕ್ ಅಪ್ ಪವರ್ ಜನರೇಟರ್, ಸಿಸಿಟಿವಿ, ಆಕ್ಸೆಸ್ ಕಂಟ್ರೋಲ್ ಸಿಸ್ಟಮ್, ಪರಿವೀಕ್ಷಣೆ, ಅಗ್ನಿಶಾಮಕ ಸೌಲಭ್ಯ, ವೀಡಿಯೋ ಡೋರ್ ಫೋನ್ ವ್ಯವಸ್ಥೆಗಳಿವೆ.**

ಸ್ಥಳೀಯ ಕಾರ್ಪೊರೇಟರ್ ಶ್ರೀಮತಿ ಸಂಧ್ಯಾ ಮೋಹನ್ ಆಚಾರ್ಯ ಮುಖ್ಯ ಅತಿಥಿಯಾಗಿದ್ದರು. ಲ್ಯಾಂಡ್ ಟ್ರೇಡ್ ಮ್ಹಾಲಕ ಶ್ರೀ ಶ್ರೀನಾಥ್ ಹೆಬ್ಬಾರ್ ಸ್ವಾಗತಿಸಿದರು. ಸಿಇಒ ಶ್ರೀ ರಮಿತ್ ಕುಮಾರ್ ಸಿದ್ಧಕಟ್ಟೆ ವಂದಿಸಿದರು. ಹಿರಿಯ ಪತ್ರಕರ್ತ ಮನೋಹರ ಪ್ರಸಾದ್ ನಿರ್ವಹಿಸಿದರು.


ಜ್ಞಾನಾರ್ಜನೆಯ ಗುರಿಯೊಂದಿಗೆ

'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!

ಶುಭಾಶಯಗಳೊಂದಿಗೆ –

**G. K. KOLPE**

House No. 7-3-31-D1, 'Vaishnavi' (Upstairs)

Vadiraja 2nd Cross, Bailakere, Udupi - 576 101

Mobile : 9449903002

Prop. : SUDHAKAR BELLE

✆ : 9845193103/ 9481563103

**KARAN DIGITAL STUDIO**


Sadasukh Building, Nr. Postoffice, Padubidri - 574 111

Opp. Busstand, Belman

All Marriage & Other functions Photography & Videography Available

# ಶೃಂಗೇರಿಯ ಜಗದ್ಗುರು ಸನ್ನಿಧಾನ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳವರಿಂದ ಕಾಶ್ಮೀರದ ಗಡಿಯಲ್ಲಿ ಶಾರದಾಂಬ ಪ್ರಾಣಪ್ರತಿಷ್ಠೆ ಮತ್ತು ಕುಂಭಾಭಿಷೇಕ





ಶೃಂಗೇರಿಯ ಜಗದ್ಗುರು ಸನ್ನಿಧಾನ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳವರಿಂದ ಕಾಶ್ಮೀರದ ಗಡಿಯಲ್ಲಿ ಶಾರದಾಂಬ ಪ್ರಾಣಪ್ರತಿಷ್ಠೆ ಮತ್ತು ಕುಂಭಾಭಿಷೇಕದಂತ ಐತಿಹಾಸಿಕ ಕಾರ್ಯಕ್ರಮ ಸಂಪನ್ನಗೊಂಡಿದೆ. ಶೃಂಗೇರಿಯಿಂದಲೇ ತೆರಳಿದ್ದ ಋತ್ವಿಕ ಶ್ರೇಷ್ಠರು ಇಲ್ಲಿನ ಸಂಪ್ರದಾಯದಂತೆ ಶ್ರೀಚಕ್ರ ಪ್ರತಿಷ್ಠಾಪಿಸಿ, ಹೋಮ–ಹವನ ನಡೆಸಿ, ದೇವಸ್ಥಾನದ ಪ್ರತಿಷ್ಠಾಪನಾ ಕಾರ್ಯ ಪೂರ್ಣಗೊಳಿಸಿದ್ದಾರೆ. ಜಗದ್ಗುರು ಸನ್ನಿಧಾನ ಜೂನ್ 4ರಂದೇ ವಿಶೇಷ ವಿಮಾನದ ಮೂಲಕ ಶ್ರೀನಗರ ತಲುಪಿದ್ದಾರೆ. ಅಲ್ಲಿ ಅವರ ಮುಂದಿನ ಪ್ರಯಾಣಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಸಕಲ ಏರ್ಪಾಟನ್ನೂ ಮಾಡಿದೆ. ಪ್ರಯಾಣಿಸಲು ಬಾಂಬ್ ನಿರೋಧಕ ವಾಹನ, ಗಡಿ ಸಮೀಪ ತಲುಪಲು ಮಿಲಿಟರಿ ಹೆಲಿಕಾಪ್ಟರ್, ಸೈನ್ಯದ ರಕ್ಷಣೆ ಮುಂತಾದ ಸಕಲ ಏರ್ಪಾಟುಗಳನ್ನೂ ಉಭಯ ಸರ್ಕಾರಗಳು ಕೈಗೊಂಡು ಜಗದ್ಗುರುಗಳ ವಿಜಯಯಾತ್ರೆಗೆ ಸಕಲ ಸಹಯೋಗ ನೀಡಿದೆ. ಶ್ರೀನಗರದಲ್ಲಿ ಉಪರಾಜ್ಯಪಾಲರು ಗುರುದರ್ಶನ ಮಾಡಿ ಆಶೀರ್ವಾದ ಪಡೆದಿದ್ದಾರೆ. ದೇವಸ್ಥಾನ ಸನಿಹದ ಹೆಲಿಪ್ಯಾಡಿನಲ್ಲಿ ಇಳಿಯುತ್ತಿದ್ದಂತೆ ಜಗದ್ಗುರುಗಳನ್ನು ಅಲ್ಲಿನ ಜಿಲ್ಲಾಧಿಕಾರಿ ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಂಡಿದ್ದಾರೆ.

ಪಾಕ್ ಗಡಿಗೆ ಹೊಂದಿಕೊಂಡಂತೆ ಇರುವ ಈ ದೇವಸ್ಥಾನಕ್ಕೆ ಅಂದು ಅತಿಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿದ್ದಾರೆ. ಅಲ್ಲಿ ಹತ್ತು ಜನ ಸೇರುವುದೂ ಕಷ್ಟ. ಅಲ್ಲಿಗೆ ಬರಲು ಜಿಲ್ಲಾಡಳಿತ ಅನುಮತಿ ಪತ್ರ ಪಡೆಯಬೇಕು. ಹೀಗಿದ್ದೂ ಅಂದು ಸೇರಿದ್ದ ಭಕ್ತರ ಸಂಖ್ಯೆ ವಿಶೇಷ ಅನಿಸದಿರದು. ಗಡಿಯಲ್ಲಿ ಗಣಹೋಮ ಸೇರಿದಂತೆ ವಿವಿಧ ಹೋಮ, ಹವನ ನಡೆದಿದ್ದು ಒಂದು ವಿಶೇಷ ಅಧ್ಯಾಯಕ್ಕೆ ನಾಂದಿ ಹಾಡಿದಂತಾಯಿತು. ಭರತ ವರ್ಷದ ಚರಿತ್ರೆಯಲ್ಲಿ ಹೊಸ ಇತಿಹಾಸ ಸೃಷ್ಟಿಸಿದ ಘಟನೆ ಇದು.

ಭಾನುವಾರ ಒಂದು ದಿನದ ವಾಸ್ತವ್ಯದ ನಂತರ ಮತ್ತೆ ಅದೇ ಸೈನ್ಯ ಹೆಲಿಕಾಪ್ಟರ್ ಮೂಲಕ ಜಗದ್ಗುರುಗಳು ಶ್ರೀನಗರಕ್ಕೆ ಹಿಂತಿರುಗಿ ಅಲ್ಲೇ ವಾಸ್ತವ್ಯ ಮಾಡಿದ್ದಾರೆ. ಅಂದು ಶ್ರೀನಗರದಲ್ಲಿ ಚಂದ್ರಮೌಳೇಶ್ವರ ಪೂಜೆ ನೆರವೇರಿದೆ. ಸೋಮವಾರ ಬೆಳಗ್ಗೆ ಶ್ರೀನಗರದ ಶಂಕರಾಚಾರ್ಯ ಬೆಟ್ಟಕ್ಕೆ ತೆರಳಿದ ಜಗದ್ಗುರುಗಳು ಅಲ್ಲಿ ಶಿವಪೂಜೆ ನೆರವೇರಿಸಿದ್ದಾರೆ. ಮಹೇಶ್ವರನಿಗೆ 1008 ರುದ್ರಾಕ್ಷಿ ಮಾಲೆ, ಕಮಲಪುಷ್ಪ ಮತ್ತು ರಜತ ಬಿಲ್ವಪತ್ರೆ ಸಮರ್ಪಿಸಿ ಜಗದ್ಗುರುಗಳಿಂದ ವಿಶೇಷ ಪೂಜೆ ಸಂದಿದೆ. ದೇವತಾಕಾರ್ಯ ಯಶಸ್ವಿಯಾಗಿ ಮುಗಿಸಿದ ನಂತರ ಜಗದ್ಗುರುಗಳು ವಿಶೇಷ ವಿಮಾನದ ಮೂಲಕ ಮಂಗಳೂರಿಗೆ ಬಂದು ಅಲ್ಲಿಂದ ಶೃಂಗೇರಿಯತ್ತ ಪ್ರಯಾಣಿಸಿದ್ದಾರೆ.

ಶಂಕರಾಚಾರ್ಯರು ಕಾಶ್ಮೀರದಿಂದ ಜಗನ್ಮಾತೆ ಶಾರದೆಯನ್ನು ಶೃಂಗೇರಿಗೆ ತಂದು ಶ್ರೀಚಕ್ರ ಪ್ರತಿಷ್ಠಾಪಿಸಿ ಶಾರದೆಯನ್ನು ಇಲ್ಲಿ ನೆಲೆಗೊಳಿಸಿದಂತೆ, ಸಹಸ್ರಾರು ವರ್ಷಗಳ ನಂತರ ಶೃಂಗೇರಿಯ ಶಂಕರಾಚಾರ್ಯರು ಶೃಂಗೇರಿಯಿಂದಲೇ ಅಮ್ಮನವರನ್ನು ಕಾಶ್ಮೀರಕ್ಕೂ ಕರೆತಂದು ಶ್ರೀಚಕ್ರ ಪ್ರತಿಷ್ಠಾಪಿಸಿ ಕಾಶ್ಮೀರದಲ್ಲೇ ಜಗನ್ಮಾತೆಯನ್ನು ನೆಲೆಗೊಳಿಸಿದ್ದು, ಸನಾತನ ಧರ್ಮದ ಇತಿಹಾಸದಲ್ಲೇ ಪವಿತ್ರ ಘಟನೆ. ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಆಗಲೇ ಶಂಕರ ಸ್ಥಾಪಿತ ಬದರಿ ಮತ್ತು ದ್ವಾರಕಾ ಪೀಠದ ಜಗದ್ಗುರುಗಳ ಪಟ್ಟಾಭಿಷೇಕ ಮಹೋತ್ಸವ ನಡೆಸಿಕೊಟ್ಟು ಶಂಕರಾಚಾರ್ಯರ ನಂತರ ಪುನಃ ಇದನ್ನು ನಡೆಸಿದ ಪ್ರಥಮ ಗುರುಗಳೆಂಬ ಕೀರ್ತಿಗೆ ಭಾಜನರಾಗಿದ್ದರು. ಈಗ ಶಂಕರಾಚಾರ್ಯರಂತೆ ಕಾಶ್ಮೀರದಲ್ಲಿ ಭಾರತದ ಉತ್ತರದ ತುದಿಯಲ್ಲಿ ಜಗನ್ಮಾತೆಯನ್ನು ಪ್ರತಿಷ್ಠಾಪಿಸಿ, ಅಭಿನವ ಶಂಕರರೆನಿಸಿದ್ದಾರೆ. ಈ ಐತಿಹಾಸಿಕ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾದವರೆಲ್ಲರೂ ಗುರುಕೃಪೆಗೆ ವಿಶೇಷವಾಗಿ ಪಾತ್ರರಾದವರು. ಪಾಲ್ಗೊಂಡ ನಾವೆಲ್ಲರೂ ಧನ್ಯರು. ಶ್ರೀಗಳಿಗೆ ಸನ್ಯಾಸ ನೀಡುವ ಸಂದರ್ಭದಲ್ಲಿ ಮಹಾಸನ್ನಿಧಾನ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ನಮ್ಮ ಶಿಷ್ಯರು ಮಹತ್ಕಾರ್ಯ ಮಾಡಿ ಶೃಂಗೇರಿಯ ಕೀರ್ತಿಯನ್ನು ಜಗತ್ಪ್ರಸಿದ್ಧ ಮಾಡಲಿದ್ದಾರೆ ಎಂದು ಹೇಳಿದ್ದರು. ಅದು ಒಂದೊಂದಾಗಿ ಸತ್ಯವಾಗುತ್ತಿದೆ. ಮಹಾತ್ಮರ ಮಾತು ವ್ಯರ್ಥ ಆಗುವುದಿಲ್ಲ. ಸನ್ನಿಧಾನ ಸನಾತನ ಧರ್ಮ ಉಳಿಸಿ ಸಂರಕ್ಷಣೆ ಮಾಡುವಲ್ಲಿ ಇನ್ನಷ್ಟು ಮಹತ್ಕಾರ್ಯ ಮಾಡುವಲ್ಲಿ ಯಾವ ಸಂಶಯವೂ ಇಲ್ಲ.

**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013


*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**



Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

## ಅಪಾರಕೀರ್ತಿ ಗಳಿಸಿ...



ಶೃಂಗೇರಿ ಸುರಸರಸ್ವತೀ ಸಭಾ (ಶ್ರೀ ಶೃಂಗೇರಿ ಶಾರದಾಪೀಠದ ಒಂದು ಉಪಕ್ರಮ) ದವರು ನಡೆಸಿದ ದ್ವಿತೀಯ ಸಂಸ್ಕೃತ ಪರೀಕ್ಷೆಯಲ್ಲಿ **ಶ್ರೀ ಕೃಷ್ಣರಾಜ ರಾವ್** ಅವರು 100ರಲ್ಲಿ 99 ಅಂಕಗಳನ್ನು ಗಳಿಸಿ ತೇರ್ಗಡೆಯಾಗಿ ಜಗದ್ಗುರುಗಳಿಂದ ಅನುಗ್ರಹಿಸಲ್ಪಟ್ಟ ಬೆಳ್ಳಿಯ ಪಾರಿತೋಷಕ ಪಡೆದಿದ್ದಾರೆ.

❋ ❋ ❋



ಪಡುಬಿದ್ರೆ ಶ್ರೀ ಎನ್. ರಮೇಶ್ ರಾವ್ ಮತ್ತು ಶ್ರೀಮತಿ ರಚನಾ ರಾವ್ ಇವರ ಸುಪುತ್ರಿ **ಅಕ್ಷತಾ ರಮೇಶ್** ಒಟ್ಟಾವ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಮಾಸ್ಟರ್ಸ್ ಪದವಿ ಪಡೆದಿದ್ದಾರೆ.

## ಉಪನಯನ

ಶ್ರೀಮತಿ ಜ್ಯೋತಿ ಮತ್ತು ಶ್ರೀ ಹರ್ಷವರ್ಧನ್ ಶಾನುಭೋಗ್ ಇವರ ಸುಪುತ್ರ **ಚಿ| ಧ್ರುವ್** ಇವನ ಬ್ರಹ್ಮೋಪದೇಶವು ತಾರೀಕು 7–06–2023ನೇ ಬುಧವಾರ ಉಡುಪಿಯ 'ಶ್ರೀ ಶಾರದಾ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

●●●

ನೆಲ್ಲಿಕುಂಜೆ ಶ್ರೀ ಅನಿಲ್ ಮತ್ತು ಶ್ರೀಮತಿ ಸವಿತಾ ಇವರ ಸುಪುತ್ರ **ಚಿ| ಅಲೋಕ್** ಇವನ ಉಪನಯನವು ತಾರೀಕು 29–05–2023ನೇ ಸೋಮವಾರ ಹೊಸಬೆಟ್ಟು 'ನವಗಿರಿ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

●●●

ಶ್ರೀ ಸುಧೀರ್ ಮತ್ತು ಶ್ರೀಮತಿ ಅಶ್ವಿನಿ ಇವರ ಸುಪುತ್ರ ಚಿ| **ಶ್ರೀಯಂ** ಇವನ ಉಪನಯನವು ತಾರೀಕು 8–06–2023ನೇ ಗುರುವಾರ ಪುತ್ತೂರಿನ 'ಶ್ರೀ ವೆಂಕಟರಮಣ ಸುಕೃತೀಂದ್ರ ಕಲಾಮಂದಿರ'ದಲ್ಲಿ ನೆರವೇರಿತು.

●●●

ಶ್ರೀ ಶಶಿಕಾಂತ್ ಮತ್ತು ಶ್ರೀಮತಿ ಚೇತನಾ ಇವರ ಸುಪುತ್ರ ಚಿ| ಸಮರ್ಥ್ ಇವನ ಬ್ರಹ್ಮೋಪದೇಶವು ತಾರೀಕು 7–06–2023ನೇ ಬುಧವಾರ ಮಂಗಳೂರಿನ ಶಕ್ತಿನಗರದ 'ಶ್ರೀ ಗೋಪಾಲಕೃಷ್ಣ ದೇವಸ್ಥಾನ'ದಲ್ಲಿ ನಡೆಯಿತು.

## ಶುಭಜನನ



ಕೇಳ ಶ್ರೀ ಸೋಮಶೇಖರ್ ಭಟ್ ಮತ್ತು ಶ್ರೀಮತಿ ಶಿಲ್ಪಾ ದಂಪತಿಗಳಿಗೆ ತಾ. 25–05–2023ನೇ ಗುರುವಾರ ಗಂಡು ಮಗುವಿನ ಜನನ.


ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

**PRAVEEN KUMAR ADYAPADY**
**NOTARY & ADVOCATE**
**MANGALORE OFFICE**
JANVI PLAZA, IInd FLOOR
BUNTS HOSTEL, MANGALORE
**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

**PRAMOD**
**AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR


## ಶುಭವಿವಾಹ

ಶ್ರೀಮತಿ ಜಯಂತಿ ರಾವ್ ಮತ್ತು ದಿ| ಮೊರಾಜೆ ಚಂದ್ರಶೇಖರ ರಾವ್‌ರವರ ಸುಪುತ್ರಿ **ಚಿ| ಸೌ| ಎಂ. ಸಿ. ಅಮೃತಾ** ಹಾಗೂ ಶ್ರೀಮತಿ ಎಂ. ಎ. ಜಯಂತಿ ಮತ್ತು ಶ್ರೀ ಅನಿಲ್ ಮೇಸ್ತರವರ ಸುಪುತ್ರ **ಚಿ| ಭರತ್** ಇವರ ವಿವಾಹವು ತಾ. 1–6–2023ನೇ ಗುರುವಾರ ಪುತ್ತೂರಿನ 'ಸ್ವಾಮಿ ಕಲಾಮಂದಿರ'ದಲ್ಲಿ ನೆರವೇರಿತು.

❋ ❋ ❋

ಶ್ರೀಮತಿ ಸುಮನಾ ಮತ್ತು ಮಠದಬೆಟ್ಟು ಶ್ರೀ ಮೋಹನ್ ರಾವ್‌ರವರ ಸುಪುತ್ರಿ **ಚಿ| ಸೌ| ಶ್ರೀವಿದ್ಯಾ** ಹಾಗೂ ಶ್ರೀಮತಿ ಸುನಂದಾ ಮತ್ತು ಶ್ರೀ ಶಿವರಾಂ ರಾವ್ ಬೈರಿಕಟ್ಟೆ ಇವರ ಸುಪುತ್ರ **ಚಿ| ಶ್ರೀಶ ರಾವ್ ಡಿ. ಎಸ್**. ಇವರ ವಿವಾಹವು ತಾರೀಕು 1–6–2023ನೇ ಗುರುವಾರ ನಾರಾವಿಯ 'ಧರ್ಮಶ್ರೀ ಸಭಾಭವನ'ದಲ್ಲಿ ಜರುಗಿತು.

❋ ❋ ❋

ಶ್ರೀಮತಿ ಕುಮುದಾ ಮತ್ತು ಶ್ರೀ ಉದಯ ಹೆಮ್ಮಾಡಿಯವರ ಸುಪುತ್ರಿ **ಚಿ| ಸೌ| ಪ್ರತೀಕ್ಷಾ** ಹಾಗೂ ಶ್ರೀಮತಿ ಸಿಂಗಾರಿ ಮತ್ತು ಮಲ್ಲೂರು ಶ್ರೀ ಶಂಕರ್ ರಾವ್ ಇವರ ಸುಪುತ್ರ **ಚಿ| ಗಣೇಶ್** ಇವರ ವಿವಾಹವು ತಾರೀಕು 21–05–2023ನೇ ರವಿವಾರ ತೆಕ್ಕಟ್ಟೆ 'ನವಶಕ್ತಿ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.


❋ ❋ ❋

ಡಾ| ಜಯಪ್ರಕಾಶ್ ಅಡೂರು ಮತ್ತು ಶ್ರೀಮತಿ ಕವಿತಾ ಜೆ. ಪಿ.ಇವರ ಸುಪುತ್ರ **ಚಿ| ಸರ್ವೇಶ್ ರಾವ್** ಹಾಗೂ ಶ್ರೀ ಚಂದ್ರಕುಮಾರ್ ಮತ್ತು ಶ್ರೀಮತಿ ಮಲ್ಲಿಕಾಲತಾರವರ ಸುಪುತ್ರಿ **ಚಿ| ಸೌ| ಮೇಘನಾ ರಾವ್** ಇವರ ವಿವಾಹವು ತಾ. 29–05–2023ನೇ ಸೋಮವಾರ ಉಡುಪಿಯ 'ಶಾರದಾ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

❋ ❋ ❋


ನೂಂಜ ಶ್ರೀ ಹರೀಶ್ ಕುಮಾರ್ ಮತ್ತು ಶ್ರೀಮತಿ ಪ್ರೇಮಲತಾ ಇವರ ಸುಪುತ್ರಿ **ಚಿ| ಸೌ| ಪೂರ್ಣಿಮಾ ಎನ್. ಎಚ್**. ಹಾಗೂ ಕೊಯಿಕುಡೆ ಶ್ರೀಮತಿ ವೀಣಾ ಮತ್ತು ಶ್ರೀ ಸತ್ಯಕುಮಾರ್ ಇವರ ಸುಪುತ್ರ **ಚಿ| ಸನತ್ ಕುಮಾರ್** ಇವರ ವಿವಾಹವು ತಾ. 8–06–2023, ಗುರುವಾರ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಸದನ'ದಲ್ಲಿ ನಡೆಯಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಉಡುಪಿ ಹೆಜಮಾಡಿ ಅಪ್ಪಿಲ್ಲ್‌ನ **ಶ್ರೀ ಶಂಕರ ನಾರಾಯಣ ರಾಯರು** (79) ತಾರೀಕು 14–6–2023ನೇ ಬುಧವಾರ ನಿಧನ ಹೊಂದಿದರು. ಅವರು ಪತ್ನಿ, ಪುತ್ರಿ, ಪುತ್ರ ಹಾಗೂ ಅಪಾರ ಬಂಧು–ವರ್ಗದವರನ್ನು ಅಗಲಿದ್ದಾರೆ.

❖❖❖



ಉಡುಪಿ ಕೊರಂಗ್ರಪಾಡಿ ನಿವಾಸಿ **ಶ್ರೀ ಎಸ್. ಮೋಹನ್ ರಾವ್** (ದಿ| ಗುಂಡುರಾವ್ ಹಾಗೂ ದಿ. ಭವಾನಿ ಗುಂಡು ರಾವ್ ದಂಪತಿಗಳ ಪುತ್ರ) ದಿನಾಂಕ 13–06–2023ನೇ ಮಂಗಳವಾರ ಬೆಳಗ್ಗೆ ಅಲ್ಪ ಕಾಲದ ಅಸೌಖ್ಯದಿಂದ ಕೊರಂಗ್ರಪಾಡಿಯ ಸ್ವಗೃಹದಲ್ಲಿ ತಮ್ಮ 83ನೇ ವರ್ಷದಲ್ಲಿ ನಿಧನರಾದರು. ಬೆಳ್ತಂಗಡಿ ತಾಲೂಕು ಅರಸಿನಮಕ್ಕಿಯವರಾದ ಇವರು ಅರಸಿನಮಕ್ಕಿಯಲ್ಲಿ ಗ್ರಾಮಕರಣಿಕರಾಗಿದ್ದು ಸ್ವಯಂ ನಿವೃತ್ತಿ ಪಡೆದು ಕಳೆದ 27 ವರ್ಷಗಳಿಂದ ಉಡುಪಿಯಲ್ಲಿ ವಾಸ್ತವ್ಯದಲ್ಲಿದ್ದರು. ಸಾದು ಸ್ವಭಾವದವರಾದ ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೂವರು ಸಹೋದರರು ಮತ್ತು ಓರ್ವ ಸಹೋದರಿ ಸಹಿತ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖❖❖



ಮರವಂತೆ ದಿ| ಗಣಪಯ್ಯ ಶಾನುಭೋಗ್‌ರವರ ಧರ್ಮಪತ್ನಿ **ಶ್ರೀಮತಿ ವಿಶಾಲಾಕ್ಷಮ್ಮ** (91) ತಾರೀಕು 7–6–2023ನೇ ಬುಧವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ನಾಲ್ವರು ಪುತ್ರರು ಮತ್ತು ಐವರು ಪುತ್ರಿಯರನ್ನು ಅಗಲಿದ್ದಾರೆ.

❖❖❖



ದಿ| ಆರೂರು ತಮ್ಮಯ್ಯರವರ ಧರ್ಮಪತ್ನಿ **ಶ್ರೀಮತಿ ಲೀಲಾವತಿಯಮ್ಮ** (90) ತಾರೀಕು 5–6–2023ನೇ ಸೋಮವಾರ ನಿಧನ ಹೊಂದಿದರು. ಅವರು ನಾಲ್ವರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

❖❖❖



ಚಿತ್ರಾಪುರ ದಿ| ಪಿ. ಆನಂದ್ ರಾವ್‌ರವರ ಧರ್ಮಪತ್ನಿ **ಶ್ರೀಮತಿ ಗಾಂಧಿನಿ** (87) ತಾರೀಕು 12–6–2023ನೇ ಸೋಮವಾರ ಚಿತ್ರಾಪುರದಲ್ಲಿ ನಿಧನ ಹೊಂದಿದರು. ಇವರು ಮೂವರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

# ಶ್ರೀ ಶಾರದಾಂಬ ಭಜನಾ ಮಂಡಳಿ, ಮಂಗಳೂರು ಇದರ ನಾಲ್ಕನೇ ವರ್ಷದ ವಾರ್ಷಿಕೋತ್ಸವ



ಶ್ರೀ ಶಾರದಾಂಬ ಭಜನಾ ಮಂಡಳಿ, ಮಂಗಳೂರು ಇದರ ನಾಲ್ಕನೇ ವರ್ಷದ ವಾರ್ಷಿಕೋತ್ಸವವನ್ನು ದಿನಾಂಕ 13–06–2023ನೇ ಮಂಗಳವಾರ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಭಜನಾ ಗುರುಗಳಾದ ಶ್ರೀ ಸುಬ್ಬ ರಾವ್ ಪೊಳಲಿ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಇವರ ಉಪಸ್ಥಿತಿಯಲ್ಲಿ ಆಚರಿಸಲಾಯಿತು. ವೇದಿಕೆಯಲ್ಲಿರುವ ಗಣ್ಯರನ್ನು ಹಾಗೂ ಉಪಸ್ಥಿತರಿದ್ದ ಎಲ್ಲರನ್ನೂ ಶ್ರೀಮತಿ ಕುಸುಮ ನವೀನ್ ಕುಮಾರ್ ಸ್ವಾಗತಿಸಿದರು. ಶಾರದಾಂಬ ಭಜನಾ ಮಂಡಳಿಯು ನಡೆದು ಬಂದ ದಾರಿಯನ್ನು ಶ್ರೀಮತಿ ಶ್ರೀಲತಾ ಗಣೇಶ್ ಓದಿದರು. ಹಿರಿಯ ಸದಸ್ಯೆ ಶ್ರೀಮತಿ ಸ್ನೇಹಲತಾ ದಿವಾಕರ್ ಮತ್ತು ಡಾ। ದಿವಾಕರ್ ರಾವ್ ದಂಪತಿಯವರನ್ನು ಹಾಗೂ ಶ್ರೀ ಕೃಷ್ಣರಾಜ್ ರಾವ್‌ರವರನ್ನು ಸನ್ಮಾನಿಸಲಾಯಿತು. ಅವರ ಪರಿಚಯವನ್ನು ಶ್ರೀಮತಿ ಸುಮಂಗಲಾ ಪ್ರಭಾಕರ್ ಮತ್ತು ಶ್ರೀಮತಿ ಪ್ರೇಮಲತಾ ಸಭೆಗೆ ಪರಿಚಯಿಸಿದರು. ಸನ್ಮಾನಿತರು ತಮ್ಮ ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಕೇದಿಗೆ ಭಜನಾ ಸದಸ್ಯರ ಪರವಾಗಿ ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಶೃಂಗೇರಿ ಶಾಂಕರತತ್ವ ಅಭಿಯಾನ ಸಂಚಾಲಕರಾದ ಶ್ರೀ ಶ್ರೀಧರ್ ಶಾಸ್ತ್ರಿಯವರು ಮಂಡಳಿಗೆ ಶುಭ ಹಾರೈಸಿದರು.

ಶ್ರೀಯುತ ಸುಬ್ಬರಾವ್ ಪೊಳಲಿಯವರು ಭಜನೆಯಲ್ಲಿ ತಮ್ಮನ್ನು ಯಾವ ರೀತಿ ತೊಡಗಿಸಿಕೊಳ್ಳುವುದು ಮತ್ತು ಹೆಚ್ಚು ಹೆಚ್ಚು ಮಕ್ಕಳನ್ನು ಭಜನೆಯಲ್ಲಿ ಸೇರಿಸಿ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆಯವರು ಮಂಡಳಿಯು ಯಶಸ್ಸು ಕಾಣಲಿ ಎಂದು ಶುಭಹಾರೈಸಿದರು.

ಈ ಸಂದರ್ಭದಲ್ಲಿ ಭಜನಾ ಮಂಡಳಿಯ ಸಾಧಕರಾದ ಶ್ರೀಮತಿ ವಲ್ಲಿ ಜ್ಞಾನೇಶ್, ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ಶಾರದಾ ರಾವ್, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್, ಶ್ರೀ ಶ್ರೀನಿವಾಸ ರಾವ್, ಶ್ರೀಮತಿ ಪ್ರೇಮಲತಾ, ಶ್ರೀಮತಿ ವೀಣಾ ಗಣೇಶ್, ಶ್ರೀಮತಿ ಸುನೀಲ್ ಭುಜಂಗ ರಾವ್, ಶ್ರೀಮತಿ ಆಶಾ ರವೀಂದ್ರ ಇವರನ್ನು ಗೌರವಿಸಲಾಯಿತು.

ಮುಂದೆ ಗಮಕದ ಹಾಡನ್ನು ಶ್ರೀ ಕೃಷ್ಣರಾಜ್ ರಾವ್‌ರವರು ತಮ್ಮ ಶಿಷ್ಯರೊಂದಿಗೆ ನಡೆಸಿಕೊಟ್ಟರು. ಕೊನೆಯದಾಗಿ ಭಜನಾಗುರುಗಳಾದ ಶ್ರೀ ಸುಬ್ಬರಾವ್ ಪೊಳಲಿಯವರು ಹಾರ್ಮೋನಿಯಂನೊಂದಿಗೆ ಮತ್ತು ತಬಲದಲ್ಲಿ ಶ್ರೀ ಕೃಷ್ಣರಾಜ್ ಸಹಕರಿಸಿ ಎಲ್ಲಾ ಭಜನಾ ಸದಸ್ಯರು ಭಜನೆ ಹಾಗೂ ಕುಣಿತ ಭಜನೆಯಲ್ಲಿ ಭಾಗವಹಿಸಿ, ಸಂಭ್ರಮಿಸಿದರು. ಈ ಎಲ್ಲಾ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಮಾಡಿದರು. ಕೊನೆಯಲ್ಲಿ ಶ್ರೀಮತಿ ಜ್ಯೋತಿ ರಾವ್ ಇವರು ಧನ್ಯವಾದವಿತ್ತರು.

ಈ ಎಲ್ಲಾ ಕಾರ್ಯಕ್ರಮಗಳಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರಾದ ಡಾ। ಎ. ಪಿ. ಕೃಷ್ಣ, ಕೋಶಾಧಿಕಾರಿ ಶ್ರೀ ಶ್ರೀಕಾಂತ ಪಿ. ರಾವ್, ಕಾರ್ಯದರ್ಶಿ ಶ್ರೀ ಕರುಣಾಕರ ಬೆಳ್ಳೆ, ಯುವವೇದಿಕೆ ಅಧ್ಯಕ್ಷರಾದ ಶ್ರೀ ಅನಿಲ್ ನೆಲ್ಲಿಕುಂಜೆ ಸಹಕರಿಸಿದರು. ಶ್ರೀ ರಘುವೀರ್ ಪೆರ್ಡೂರು ಇವರು ಕಾರ್ಯಕ್ರಮದ ಛಾಯಾಗ್ರಹಣವನ್ನು ತೆಗೆದು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ಶ್ರೀ ಸಂತೋಷ್ ಕುಮಾರ್, ಶ್ರೀ ಉದಯ ಕುಮಾರ್, ಶ್ರೀ ಉದಯಕುಮಾರ್ ಪಿ. ಇವರು ಉಪಸ್ಥಿತರಿದ್ದರು. ಲಘು ಉಪಾಹಾರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## MUTBI - MAHE ವಿಶ್ವವಿದ್ಯಾಲಯದ ನೂತನ ಸಿ.ಇ.ಓ ಆಗಿ ಡಾ. ಸಂತೋಷ ರಾವ್ ಇವರಿಂದ ಅಧಿಕಾರ ಸ್ವೀಕಾರ



ಶ್ರೀ ಬಾಬು ರಾವ್ ಮತ್ತು ಶ್ರೀಮತಿ ಸುಲೋಚನಾ ಮಸ್ತಿಬೈಲ್ ಇವರ ಸುಪುತ್ರ ಡಾ. ಸಂತೋಷ ರಾವ್‌ರವರು MUTBI-MAHEಯ (Manipal University Technology Business Incubator -Manipal Academy of Higher Education) ನೂತನ ಸಿ.ಇ.ಓ ಆಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಸಂದರ್ಭ ಸಂಸ್ಥೆಯ ಗಣ್ಯರು ಉಪಸ್ಥಿತರಿದ್ದರು.

M.Devanand bhat
Mob: 9845644556
9663993883
Shobha Digital STUDIO
Belavai Moodabidri Yedapadavu
08258-276177 9901995655 0824-2256374
mdevanandbhat@gmail.com

Muralidhara Rao Adyapadi
Proprietor
Mob : 94480 27259
99803 16434
SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

PREETHIKA AUTOMOBILES
2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಶೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical,
Plumbing and Sanitary works

# ಜಗದ್ಗುರು ಸನ್ನಿಧಾನಂಗಳವರ ಕಾಶ್ಮೀರದ ಎರಡೂವರೆ ದಿನದ ಯಾತ್ರೆಯ ಬಗ್ಗೆ ಶೃಂಗೇರಿ ಶಾರದಾಪೀಠದ ಭಕ್ತ ಶ್ರೀ ಎನ್. ವೆಂಕಟರಮಣನ್ ಇವರ ಸಂಕ್ಷಿಪ್ತ ಲೇಖನ

ಕಳೆದ ವರ್ಷ ಶಾರದಮ್ಮನವರ ಪಂಚಲೋಹದ ಮೂರ್ತಿಯನ್ನು ಉಭಯ ಜಗದ್ಗುರುಗಳು ಪೂಜಿಸಿ, ಶೃಂಗೇರಿಯಿಂದ ಕಳಿಸಿಕೊಡುವಾಗಲೇ ಆಗಮಿಸಿದ್ದ ಶ್ರೀ ರವೀಂದ್ರ ಜೋಷಿ ಮತ್ತು ಇತರೇ ಭಕ್ತರು ಜಗದ್ಗುರುಗಳಿಂದ ಶಾರದಾ ಪ್ರತಿಷ್ಠೆ ಮತ್ತು ಕುಂಭಾಭಿಷೇಕ ನೆರವೇರಿಸಬೇಕೆಂಬ ಬೇಡಿಕೆ ಇಟ್ಟಿದ್ದರು. ಆದರೆ ಉಭಯ ಜಗದ್ಗುರುಗಳೂ ಏನೂ ಭರವಸೆ ನೀಡಿರಲಿಲ್ಲ.

ಈ ವರ್ಷ ಮಾರ್ಚ್‌ನಲ್ಲಿ ದೇವಸ್ಥಾನ ಆರಂಭೋತ್ಸವ ಇಟ್ಟುಕೊಂಡಾಗ ಶೃಂಗೇರಿಯಿಂದ ಋತ್ವಕರನ್ನು ಕಳುಸಲಾಗಿತ್ತು. ಆರಂಭೋತ್ಸವಕ್ಕೆ ಆಡಳಿತಾಧಿಕಾರಿ ಶ್ರೀ ಗೌರೀಶಂಕರ್ ತೆರಳಿದ್ದರು. ವರ್ಚುವಲ್ ಕಾರ್ಯಕ್ರಮದಲ್ಲಿ ದೇಶದ ಗೃಹಸಚಿವ ಶ್ರೀ ಅಮಿತ್‌ಶಾ ದೇವಸ್ಥಾನ ಉದ್ಘಾಟಿಸಿದರು. ನಮ್ಮ ಸಂಸದ ಶ್ರೀ ತೇಜಸ್ವೀ ಸೂರ್ಯ ಈ ಕಾರ್ಯಕ್ಕೆ ಗೃಹಸಚಿವರ ಮನ ಒಲಿಸಿದ್ದರಂತೆ. ಕಾಶ್ಮೀರದ ಉಪರಾಜ್ಯಪಾಲರೂ ಅಂದು ವರ್ಚುಯಲ್ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ್ದರು. ಅಂದೇ ರವೀಂದ್ರ ಪಂಡಿತ್ ಮೇ ತಿಂಗಳಲ್ಲಿ ಶಾರದಮ್ಮನ ಪ್ರಾಣಪ್ರತಿಷ್ಠೆ ಮತ್ತು ಕುಂಬಾಭಿಷೇಕ ಶೃಂಗೇರಿಯ ಶಾರದಾಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರಿಂದ ನಡೆಯಲಿದೆ ಎಂದು ಪ್ರಕಟಿಸಿದ್ದರು. ಆದರೆ ಮಹಾಸನ್ನಿಧಾನ ಈ ಯಾತ್ರೆಗೆ ಸನ್ನಿಧಾನಕ್ಕೆ ಆದೇಶ ನೀಡುತ್ತಾರೆಂದು ನಾವೆಲ್ಲಾ ನಿರೀಕ್ಷಿಸಿದ್ದೆವು.

ನವಂಬರ್‌ನಲ್ಲಿ ವೆಂಕಟರಮಣನ್ ಶ್ರೀನಗರಕ್ಕೆ ಒಂದು ಉಪನ್ಯಾಸಕ್ಕೆ ತೆರಳಿದ್ದರಂತೆ. ಈಶಾನ್ಯ ರಾಜ್ಯದ ನ್ಯಾಯಾಂಗದ 125 ನ್ಯಾಯಾಧೀಶರ ಆ ಸಭೆಯಲ್ಲಿ ಕಾಶ್ಮೀರದಲ್ಲಿ ಟೀಟ್ವಾಲ್‌ನಲ್ಲಿ ಶಾರದಾಂಬ ದೇವಸ್ಥಾನ ಆಗುತ್ತಿರುವ ಸಂಗತಿಯನ್ನು ಪ್ರಸ್ತಾಪಿಸಿದರಂತೆ. ಆಗ ನ್ಯಾಯಾಂಗದ ಅಧಿಕಾರಿಣಿಯೋರ್ವರು ಕಾಶ್ಮೀರದಲ್ಲಿ ಶಾರದಮ್ಮ ಬರುವುದು ಅತ್ಯಂತ ಹರ್ಷದಾಯಕ. ಮಾತೆಯನ್ನು ಶೃಂಗೇರಿಯ ಶಂಕರಾಚಾರ್ಯರೇ ಕರೆತರಬೇಕು ಎಂದರಂತೆ. ನಿಮ್ಮ ಆಶಯ ಸರಿಯಾದದ್ದು. ಆದರೆ ಅಂತದ್ದೊಂದು ದೂರದ ಕನಸು ಕಾಣುವುದು ಕಷ್ಟ. ಆ ಸಂಭಾವ್ಯತೆಯನ್ನು ದೇವಿಯೇ ಆಗಗೊಡಬೇಕು ಎಂದು ಉತ್ತರಿಸಿದ್ದರಂತೆ. ಯಾವ ಕೋರಿಕೆಗೂ ಅಮ್ಮನವರ ಅನುಗ್ರಹ ಆಗಬೇಕು ಎಂದೇ ಹೇಳುತ್ತಾ ಬಂದ ಜಗದ್ಗುರುಗಳು ತಮ್ಮ ಶಿಷ್ಯರಿಗೆ ಜೂನ್ 5, ಜ್ಯೇಷ್ಠ ಕೃಷ್ಣ ಪಾಡ್ಯ ಸೋಮವಾರದಂದು ಕಾಶ್ಮೀರ ತೆರಳಿ ಅಮ್ಮನವರ ಪ್ರತಿಷ್ಠಾ ಕುಂಬಾಭಿಷೇಕ ನೆರವೇರಿಸಬೇಕೆಂದು ಸೂಚಿಸಿದರು. ಅದೂ ಕೇವಲ 9 ದಿನ ಬಾಕಿ ಇರುವಾಗ ಕಾರ್ಯಕ್ರಮದ ಆಯೋಜಕರಿಗೆ ಇದು ಅಸಂಭವ ಅನಿಸಿತು. ಜಗದ್ಗುರುಗಳನ್ನು ಪಾಕ್ ಗಡಿಗೆ ತರುವುದು ಸಣ್ಣ ಕಾರ್ಯ ಅಲ್ಲ. ಅದಕ್ಕೆ ಕೇಂದ್ರ ಸರ್ಕಾರ ಮತ್ತು ಜಮ್ಮು ಕಾಶ್ಮೀರ ಸರ್ಕಾರ ಅನುಮತಿ ಸಹಯೋಗ ನೀಡಬೇಕು. ವಿಶೇಷ ನಮ್ಮ ಸೈನ್ಯ ಒಪ್ಪಬೇಕು. ಶ್ರೀನಗರ ಮತ್ತು ಕುಪ್ವಾರ ಜಿಲ್ಲಾಡಳಿತ ಒಪ್ಪಿ ಸಹಕರಿಸಬೇಕು.

ಶೃಂಗೇರಿಯ ಶಂಕರಾಚಾರ್ಯರು ಬರುವುದೆಂದರೆ ಅವರು ಹಾಗೆ ಬಂದು ಹೋಗುವುದಿಲ್ಲ. ಅವರ ನಿತ್ಯ ಅನುಷ್ಠಾನ ಶ್ರೀ ಚಂದ್ರಮೌಳೇಶ್ವರ ಪೂಜೆ, ಮಾಧ್ಯಾಹ್ನಿಕ ಯಾವುದರಲ್ಲೂ ವ್ಯತ್ಯಯ ಆಗುವಂತಿಲ್ಲ. ಟಿಟ್ವಾಲ್‌ನಲ್ಲಿ ಯಾವುದಕ್ಕೂ ಅವಕಾಶ ಇಲ್ಲ. ಇಲ್ಲಿ ತಯಾರಿಗೆ ತಿಂಗಳಾದರೂ ಬೇಕಾಗುತ್ತದೆ. ದಯಮಾಡಿ ತಿಂಗಳು ಅವಕಾಶ ಇರುವ ಬೇರೆ ದಿನ ನಿರ್ಧರಿಸಿ ಎಂದು ಜಗದ್ಗುರುಗಳಲ್ಲಿ ನಿವೇದಿಸಿಕೊಂಡಾಗ ಸನ್ನಿಧಾನ ನಮ್ಮ ಗುರುಗಳು ಅಮ್ಮನವರ ಪ್ರೇರಣೆಯಂತೆ ನಿಗದಿ ಮಾಡಿದ ಮುಹೂರ್ತ. ಆ ಕಾರ್ಯಕ್ರಮ ಅಮ್ಮನವರೇ ನಡೆಸಿಕೊಳ್ಳುತ್ತಾರೆ. ನೀವು ಯಾವ ಆತಂಕಪಡದೇ ಕಾರ್ಯಕ್ರಮದ ಸಿದ್ಧತೆ ಮಾಡಿ ಎಂದು ಸೂಚಿಸಿದರಂತೆ. ನಂತರ ನಡೆದಿದ್ದೆಲ್ಲಾ ಪವಾಡ. ಶಂಕರಾಚಾರ್ಯರ ಭೇಟಿಗೆ ಸಕಲ ಏರ್ಪಾಟನ್ನೂ ಕೇಂದ್ರ ಸರ್ಕಾರ, ಜಮ್ಮುಕಾಶ್ಮೀರ ಸರ್ಕಾರ, ಸೈನ್ಯ, ಪೋಲೀಸರು, ಎರಡೂ ಜಿಲ್ಲಾಡಳಿತ ತಮ್ಮದೇ ಕಾರ್ಯಕ್ರಮ ಎಂದು ಸಿದ್ಧತೆ ಮಾಡಿದರು. ಹೂ ಎತ್ತಿದಂತೆ ಎಲ್ಲಾ ಅನುಕೂಲ ಒದಗಿಬಂದಿತು.

ಶೃಂಗೇರಿಯಿಂದ ಜೂನ್ 4ರಂದು ಹೊರಟ ಸನ್ನಿಧಾನ ಮಧ್ಯಾಹ್ನ 3–00 ಗಂಟೆಯ ಶ್ರೀನಗರ ತಲುಪಿದರು. ಅವರನ್ನು ರಾಜ್ಯ ಸರ್ಕಾರದ ಪರವಾಗಿ ಅಧಿಕಾರಿಗಳು ಭಕ್ತಿಪೂರ್ವಕವಾಗಿ ಬರಮಾಡಿಕೊಂಡರು. ಜಗದ್ಗುರುಗಳ ಸಂಚಾರಕ್ಕೆ ಬಾಂಬ್ ನಿರೋಧಕ ವಾಹನ ವ್ಯವಸ್ಥೆ ಮಾಡಲಾಗಿತ್ತು. ಉಪರಾಜ್ಯಪಾಲ ಸಕ್ಸೇನ ಶ್ರೀನಗರದಲ್ಲಿ ಜಗದ್ಗುರುಗಳ ಭೇಟಿಯಾಗಿ ಆಶೀರ್ವಾದ ಪಡೆದು ತಮ್ಮ ನಿವಾಸಕ್ಕೆ ಚಿತ್ತೈಸಬೇಕು ಎಂದು ಕೋರಿಕೊಂಡರು. ಶ್ರೀನಗರದಿಂದ ಟೀಟ್ವಾಲ್‌ಗೆ 110 ಕಿ. ಮೀ. ದೂರ ರಸ್ತೆಯ ಮಾರ್ಗದಲ್ಲಿ ಹೋಗಲು 5 ಗಂಟೆ ಬೇಕಾಗುತ್ತದೆ. ತಿರುವು ಮುರುವಿನ ಘಾಟಿ ರಸ್ತೆ. ಅರ್ಧ ದೂರದಲ್ಲಿ ಕುಪ್ವಾರ ಇದೆ. ಇದು ಜಿಲ್ಲಾ ಕೇಂದ್ರ. ಟಿಟ್ವಾಲ್ ಇದೇ ಜಿಲ್ಲೆಯಲ್ಲಿದೆ. ಕುಪ್ವಾರದಿಂದ ಸಮುದ್ರ ಮಟ್ಟದಿಂದ 10 ಸಾವಿರ ಕಿ. ಮೀ. ಎತ್ತರದ ಶಿಖರ ಏರಿ ಕಣಿವೆ ಮಾರ್ಗದಲ್ಲಿ ಟೀಟ್ವಾಲ್ ತಲುಪಬೇಕು. ಸುಂದರವಾದ ಪ್ರಕೃತಿ ಮಾರ್ಗ ಇದು. ಆದರೆ ಕಾಶ್ಮೀರದ ಸೂಕ್ಷ್ಮ ಪ್ರದೇಶ. ಯಾವ ಗಳಿಗೆ ಏನಾದೀತು ಹೇಳುವಂತಿಲ್ಲ. ಎಷ್ಟು ಕಟ್ಟೆಚ್ಚರದಲ್ಲಿದ್ದರೂ ಕಡಿಮೆ. ಹೀಗೆಂದೇ ಶಂಕರಾಚಾರ್ಯರನ್ನು ಮಿಲಿಟರಿ ಹೆಲಿಕಾಪ್ಟರ್‌ನಲ್ಲಿ ಟಿಟ್ವಾಲ್ ಹತ್ತಿರದ ಥಂಗದರ್‌ಗೆ ಕರೆದೊಯ್ಯಲು ನಿರ್ಧರಿಸಲಾಗಿತ್ತು. ಅಲ್ಲಿನ ಸಮೀಪ ಕರ್ಣದಲ್ಲಿ ಸೈನ್ಯದ ಬ್ರಿಗೇಡ್ ಕಮಾಂಡ್ ಇದೆ. ಇಲ್ಲಿಂದ ದೇವಸ್ಥಾನ ಇರುವ ಟಿಟ್ವಾಲ್‌ಗೆ ಮತ್ತೆ ಅರ್ಧ ಗಂಟೆ ವಾಹನದಲ್ಲಿ ಕ್ರಮಿಸಬೇಕು. ಸನ್ನಿಧಾನ ಅಲ್ಲಿಗೆ ಸಂಜೆ 5–00 ಗಂಟೆಗೆ ತಲುಪಿ ಅಲ್ಪಕಾಲದ ನಂತರ ಟಿಟ್ವಾಲ್‌ಗೆ ಪ್ರಯಾಣಿಸಿದರು. ದೇವಸ್ಥಾನಕ್ಕೆ ತೆರಳಿ ತಮ್ಮ ಮತ್ತು ಗುರುಗಳಿಂದ ಪೂಜಿಸಲ್ಪಟ್ಟು ಶೃಂಗೇರಿಯ ಶಾರದಮ್ಮನ ಸನ್ನಿಧಿಯಿಂದ ಪ್ರಾರ್ಥಿಸಿ ತಂದ ಶ್ರೀಚಕ್ರವನ್ನು ಕಾಶ್ಮೀರದ ಶಾರದೆ ಸನ್ನಿಧಿಯಲ್ಲಿ ಪ್ರತಿಷ್ಠಾಪಿಸಿದರು. ಜಗನ್ಮಾತೆ ಶೃಂಗೇರಿಯ ಶಾರದಮ್ಮನಲ್ಲಿ ಅವರು ಪ್ರಾರ್ಥಿಸಿಯೇ ಬಂದಿದ್ದರು. ತಾಯೇ ಸಾವಿರದ ಇನ್ನೂರು ವರ್ಷದ ಹಿಂದೆ ನಿನ್ನನ್ನು ಕಾಶ್ಮೀರದಿಂದ ಶೃಂಗೇರಿಗೆ ಶಂಕರ ಭಗವತ್ಪಾದರು ತಂದು ಅನವರತ ಅಲ್ಲಿ ಸಾನಿಧ್ಯ ಇರುವಂತೆ ಶ್ರೀಚಕ್ರದಲ್ಲಿ ಪ್ರತಿಷ್ಠಾಪಿಸಿದ್ದರು. ಇಂದು ನಿನ್ನ ಪ್ರೇರಣೆಯಂತೆ ಇಲ್ಲಿ ಅನವರತ ಸಾನಿಧ್ಯ ಇದ್ದು ಭಾರತದ ರಕ್ಷಣೆಯ ಹೊಣೆ ನೀನೇ ಹೊರಬೇಕು ಎಂದು ಪ್ರಾರ್ಥಿಸಿ ಶೃಂಗೇರಿಯಿಂದ ತಂದ ಶ್ರೀಚಕ್ರ ಇಲ್ಲಿ ಪ್ರತಿಷ್ಠಾಪಿಸುತ್ತಿದ್ದೇವೆ. ನೀನು ಜಗತ್ತಿನ ಮಾತೆ. ಭರತವರ್ಷದ ಮುಕುಟಮಣಿಯಲ್ಲಿ ನೆಲೆಸಿ ಅನವರತ ನಿನ್ನ ಮಕ್ಕಳನ್ನು ಕಾಯಬೇಕು ತಾಯೇ ಎಂದು ಪ್ರಾರ್ಥನೆ ಸಲ್ಲಿಸಿರಬೇಕು.

ಈ ಕಾರ್ಯದ ನಂತರ ಮರುದಿನದ ಧಾರ್ಮಿಕ ಕಾರ್ಯಕ್ರಮದ ಎಲ್ಲಾ ಸಿದ್ಧತೆ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡಿ ಶ್ರೀ ವಿಧುಶೇಖರ ಭಾರತೀ ಸನ್ನಿಧಾನ ಮತ್ತೆ ಕರ್ಣಂ ಬ್ರಿಗೇಡಿಯರ್ ಕೇಂದ್ರಕ್ಕೆ ಹಿಂತಿರುಗಿದರು. ಕಾಶ್ಮೀರದ ಆ ಸೈನ್ಯ ನೆಲೆಯಲ್ಲೇ ಅಂದು ಶಂಕರಾಚಾರ್ಯರಿಂದ ಶ್ರೀ ಚಂದ್ರಮೌಳೇಶ್ವರ ಪೂಜೆ. ಕಣಿವೆಯಲ್ಲಿ ರುದ್ರ ಪಠಣ, ವೇದಮಂತ್ರಗಳು, ನವ ಶಖೆಯೊಂದರ ಆರಂಭವನ್ನು ಸಾರುತ್ತಿದ್ದಂತಿತ್ತು. ಪೂಜೆಯ ನಂತರ ಪ್ರತಿಯೊಬ್ಬರಿಗೂ ಗುರುಗಳು ಪ್ರಸಾದ ಅನುಗ್ರಹಿಸಿದರು. ಆಗ ರಾತ್ರಿ 10–30 ಆಗಿತ್ತು. ಹೊರಬಂದ ಶ್ರೀಗಳು ಸೈನ್ಯಾಧಿಕಾರಿಗಳೊಂದಿಗೆ ಸನಿಹದ ಸೈನ್ಯ ಸ್ಮಾರಕಕ್ಕೆ ಭೇಟಿ ನೀಡಿದರು. ಭಾರತಾಂಬೆಗಾಗಿ ಪ್ರಾಣಪುಷ್ಪ ಸಮರ್ಪಿಸಿದ ಸರ್ವರ ಶ್ರೇಯಸ್ಸಿಗಾಗಿ ಪ್ರಾರ್ಥಿಸಿದರು. 40 ನಿಮಿಷ ಅಲ್ಲಿದ್ದು ಹೊರ ಬಂದು ಮತ್ತು 15 ನಿಮಿಷ ಕಾಲ ಸೈನ್ಯಾಧಿಕಾರಿಗಳ ಜೊತೆಗೆ ಭದ್ರತಾ ಕಾರ್ಯಗಳ ಕುರಿತು ಚರ್ಚಿಸಿದರು. ಆಗ ದೂರದಲ್ಲಿ ನಿಂತಿದ್ದ ವೆಂಕಟರಮಣನ್ ಸುತ್ತ ಸೈನ್ಯಾಧಿಕಾರಿಗಳ ಕುಟುಂಬದ ಸದಸ್ಯರು ನೆರೆದಿದ್ದರು. ನಾವು ಅನುಕ್ಷಣವೂ ನಮ್ಮ ಸೈನ್ಯದ ರಕ್ಷಣೆಯ ಪ್ರಾರ್ಥನೆ ಸಲ್ಲಿಸುತ್ತೇವೆ. ಅವರ ಕ್ಷೇಮಕ್ಕಾಗಿ ಆತಂಕದಿಂದ ಪ್ರಾರ್ಥನೆ ಮಾಡುತ್ತಿದ್ದ ನಮಗೆಲ್ಲಾ ಇಂದು ಧೈರ್ಯ ಬಂದಿದೆ. ಸಾಕ್ಷಾತ್ ಶಂಕರಾಚಾರ್ಯರು ಅಮ್ಮನವರ ಮತ್ತು ಶ್ರೀ ಚಂದ್ರಮೌಳೇಶ್ವರ ಪೂಜೆ ಇಲ್ಲಿ ನೆರವೇರಿಸಿದ್ದಾರೆ. ನಮಗೆ ಇನ್ನು ಯಾವ ಆತಂಕವೂ ಇಲ್ಲ. ಸೈನ್ಯಕ್ಕೆ ಭಗವಂತನ ಸಂರಕ್ಷಣೆ ಕವಚ ಗುರುಗಳು ದೊರಕಿಸಿಕೊಟ್ಟಿದ್ದಾರೆ. ಜನ್ಮ ಜನ್ಮಾಂತರದ ಪುಣ್ಯದಿಂದ ನಮಗೆ ಈ ಭಾಗ್ಯ ಒದಗಿ ಬಂದಿದೆ ಎಂದು ಹೇಳುವಾಗ ವೆಂಕಟರಮಣನ್ ಸಹ ಭಾವುಕರಾದರು. ಮರುದಿನ ನಿತ್ಯವಿಧಿ ಪೂರೈಸಿ 9–00 ಗಂಟೆಗೆ ಜಗದ್ಗುರುಗಳು ಟಿಟ್ವಾಲ್‌ಗೆ ತೆರಳಿ ಅಲ್ಲಿ ನದಿಯಲ್ಲಿ ಪುಣ್ಯಸ್ನಾನ ಮಾಡಿ ಕಾಲ್ನಡಿಗೆಯಲ್ಲೇ ಶಾರದಮ್ಮನ ದೇವಸ್ಥಾನಕ್ಕೆ ಚಿತ್ತೈಸಿದರು.

ಶೃಂಗೇರಿಯಿಂದ ಅಮ್ಮನವರ ಅಲಂಕಾರಕ್ಕೆ ಹೂಗಳನ್ನು ಸಹ ತರಲಾಗಿತ್ತಾದರೂ ಅದು ಹೊಸದಾಗಿರಲಿಲ್ಲ. ಅಮ್ಮನವರ ಪೂಜೆಗೆ ಬೇಕಾದಷ್ಟು ಬಣ್ಣ ಬಣ್ಣದ ಗುಲಾಬಿ ಮತ್ತಿತರ ಪುಷ್ಪವನ್ನು ಆಕೆಯೇ ತರಿಸಿಕೊಂಡಿದ್ದಳು. ಬ್ರಿಗೇಡ್ ಕ್ಯಾಂಪಿನಲ್ಲಿ ಅರಳಿದ ಪುಷ್ಪಗಳಿಗೆ ಅಂದು ಜಗದ್ಗುರುಗಳಿಂದ ಅಮ್ಮನವರನ್ನು ಅಲಂಕರಿಸುವ ಪುಣ್ಯ. ಗುರುಗಳು ಶಾಸ್ತ್ರಕ್ಕೆ ಕಿಂಚಿತ್ತೂ ಲೋಪ ಬಾರದಂತೆ ಎಲ್ಲಾ ಧಾರ್ಮಿಕ ಕಾರ್ಯಕ್ರಮ ನಡೆಸಿ ತಾಯಿಯ ಸನ್ನಿಧಿಯಲ್ಲಿ ಧ್ಯಾನಮಗ್ನರಾಗಿ ಕುಳಿತು ಲೋಕಕಲ್ಯಾಣಕ್ಕಾಗಿ ಪ್ರಾರ್ಥಿಸಿದರು. ಆಗ ಮತ್ತೊಂದು ಪವಾಡ ನಡೆಯಿತು. ಆಕಾಶದಲ್ಲಿ ದಟ್ಟೈಸಿದ್ದ ಮೋಡ ಸರಿದು ಸೂರ್ಯ ಕಿರಣಗಳು ಅಮ್ಮನವರ ಕಿರೀಟಕ್ಕೆ ತಲುಪಿ ಆ ಕ್ಷಣ ಪ್ರಭೆಯಿಂದ ಕಂಗೊಳಿಸುವಂತೆ ಮಾಡಿತು. ಒಂದು ನಿಮಿಷ ಸಹ ಆಗಿರಲಿಲ್ಲ ಈ ದೃಶ್ಯ ಮರೆಯಾಯಿತು. ಅಲ್ಲಿ ನೆರೆದವರು ಈ ದೃಶ್ಯ ಚಿತ್ರಿಸಿಕೊಂಡರು.

ದೇಶದ ಇತಿಹಾಸದಲ್ಲಿ ಮಹತ್ವದ ನೇತಾರನಾಗಿ ರಾಷ್ಟ್ರಸೇವೆಯಲ್ಲಿ ಸಮರ್ಪಿಸಿಕೊಂಡ ನರೇಂದ್ರ ಮೋದಿಯವರ ಸಂಕಲ್ಪ ಸಿದ್ಧಿಸುವಲ್ಲಿದ್ದ ಯಾವುದೇ ಅಡೆತಡೆ ಇನ್ನು ಇರಲಾಗದಂತೆ ಈ ಪೂಜೆ ಯಶಸ್ವಿಯಾಗಿದೆ. ಮರುದಿನ ಶ್ರೀಗಳು ಶಂಕರಾಚಾರ್ಯ ಬೆಟ್ಟಕ್ಕೆ ಪ್ರಯಾಣಿಸಿ ಅಲ್ಲಿ ಈಶ್ವರ ಪೂಜೆ ನೆರವೇರಿಸಿದ್ದಾರೆ. ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ವಿದ್ಯಾತೀರ್ಥ ಮಹಾಸ್ವಾಮಿಗಳು, ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಸಹ ತಮ್ಮ ವಿಜಯಯಾತ್ರೆಯಲ್ಲಿ ಈ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿದ್ದ ಇತಿಹಾಸ ಮತ್ತೆ ಮರುಕಳಿಸಿದೆ. ಜಗದ್ಗುರುಗಳಿಂದ ಅಂದು ನಡೆದ ಆಶೀರ್ವಚನದಲ್ಲಿ ಕಾಶ್ಮೀರದಲ್ಲಿ ಶಾಂತಿ ಸೌಹಾರ್ದತೆ ನೆಲೆಸಲಿ ಎಂಬ ಹಾರೈಕೆ ಸಿಕ್ಕಿದೆ. ನಮ್ಮ ಸೈನಿಕರ ತ್ಯಾಗ ಬಲಿದಾನವನ್ನು ಶ್ರೀಗಳು ವಿಶೇಷವಾಗಿ ಸ್ಮರಿಸಿದ್ದಾರೆ. ತಮ್ಮ ಈ ಯಾತ್ರೆಗೆ ಸಹಯೋಗ ನೀಡಿದ ಎಲ್ಲರನ್ನೂ ಜಗನ್ಮಾತೆ ಸಂರಕ್ಷಿಸಲಿ ಎಂದು ಆಶೀರ್ವಚಿಸಿದ್ದಾರೆ. ಭರತವರ್ಷದ ಇತಿಹಾಸದಲ್ಲಿ ನವ ಮನ್ವಂತರ ಆರಂಭದ ಸೂಚನೆಯಾಗಿ ಈ ವಿಜಯಯಾತ್ರೆ ಸಂಪನ್ನಗೊಂಡಿದೆ.

ಪತ್ರಿಕೆಗೆ ಶುಭ ಬಯಸುವ–



ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

Prop. : P. Srikanth Rao Mobile : 9343361618
M/s. SAMARPAN
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4



Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)



ಪತ್ರಿಕೆಗೆ ಶುಭ ಬಯಸುವ–



ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

# ಸದಾ ಚಲನಶೀಲ, ಚಿರಂತನ, ಸಮಾಜೋಪಯೋಗೀ 'ಕಾಯಕರತ್ನ' ಬಿರುದಾಂಕಿತ ಪಾಟಾಳಿ ಕೃಷ್ಣಜನಾರ್ದನ ರಾವ್



ಕೇಂದ್ರ ಅಬಕಾರೀ ಇಲಾಖೆಯಲ್ಲಿ ಅರುವತ್ತು ವರ್ಷ ದುಡಿದು ಕಳೆದ ಇಪ್ಪತ್ತು ವರ್ಷದಿಂದ ಬೆಂಗಳೂರಿನ ವಿಜಯನಗರದ ಅಬಕಾರೀ ವಸತಿ ಪ್ರದೇಶದ ಎಂಟನೇ ಮೈನ್‌ನಲ್ಲಿರುವ ಲಕ್ಷ್ಮೀ ನಿಲಯದಲ್ಲಿ ಹೆಂಡತಿ ಶಾಂತಾ, ಇಬ್ಬರು ಮಕ್ಕಳು, ಸೊಸೆ, ಮೊಮ್ಮಗಳೊಂದಿಗೆ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ. ಪಾಟಾಳಿ ಕೃಷ್ಣಜನಾರ್ದನ ರಾವ್ ಇವರು ತಮ್ಮ ಪಾದರಸದಂತಹ ವ್ಯಕ್ತಿತ್ವದಿಂದ ಎಲ್ಲರಿಗೂ ಚಿರಪರಿಚಿತರು. ಒಮ್ಮೆ ಭೇಟಿಯಿತ್ತ ಸ್ಥಳ, ಸಂದರ್ಭ, ವಿಶೇಷತೆ ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಒಪ್ಪಿಸುವ, ಪ್ರತೀ ಪ್ರದೇಶದ ಇಂಚಿಂಚನ್ನೂ ಸ್ವತಃ ಗೂಗಲ್‌ನಂತೆ ಗುರುತಿಸುವ ಜನಾರ್ದನ ರಾಯರ ನೆನಪಿನ ಶಕ್ತಿ ಗೂಗಲ್‌ನ್ನೇ ನಾಚಿಸುವಂತಹದ್ದು.

ಎಂಬತ್ತೊಂದರ ಇಳಿವಯಸ್ಸಿನಲ್ಲೂ ಹದಿನೆಂಟರ ಯುವಕರಂತೆ ನಡೆದಾಡಿ, ಸದಾ ಚಟುವಟಿಕೆಯ ಚಿರಂತನ ಚಲನಶೀಲರಾಗಿರುವ ಪಿ. ಕೆ. ಜನಾರ್ದನ ರಾವ್‌ರವರು ಮುಂಜಾನೆ ಐದು ಗಂಟೆಗೆ ಎದ್ದು ಸಮೀಪದ ಉದ್ಯಾನದಲ್ಲಿ ನಡೆದಾಡಿ, ನಗೆಕೂಟದಲ್ಲಿ ಭಾಗವಹಿಸಿ, ತಮ್ಮ ಜೀವನದಲ್ಲಿ ಕ್ರಿಯಾಶೀಲ ನಗುವಿನ ನಗದನ್ನು ತುಂಬಿಕೊಂಡು ಇಡೀ ದಿನ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಳ್ಳುತ್ತಾರೆ. ಸುಮಾರು ಎಂಟು ಗಂಟೆಯ ಹೊತ್ತಿಗೆ ಮನೆಗೆ ಹಿಂತಿರುಗಿ ತಮ್ಮ ದೈನಂದಿನ ಕಾರ್ಯದಲ್ಲಿ ತೊಡಗಿಕೊಳ್ಳುತ್ತಾರೆ. ನಿವೃತ್ತಿ ತರುವಾಯ ಕಳೆದ ಇಪ್ಪತ್ತು ವರ್ಷದಿಂದ ಇದೇ ರೀತಿಯಲ್ಲಿದ್ದು ನಗೆ ಕೂಟದಲ್ಲೂ ಸಕ್ರಿಯರಾಗಿದ್ದಾರೆ.

ಇವರು ಕಳೆದ ಹದಿನೆಂಟು ವರ್ಷಗಳಿಂದ ಬೆಂಗಳೂರಿನ ಟಿ.ಸಿ.ಎಸ್.ರವರು ನಡೆಸುವ ಹಿರಿಯ ನಾಗರಿಕರ ಓಟದಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದು ಇವರ ಸಕ್ರಿಯ ಭಾಗವಹಿಸುವಿಕೆಯನ್ನು ಮನಗಂಡು 2022ರ ನವೆಂಬರ್ 24ರಂದು ಬೆಂಗಳೂರಿನ ಕನ್ನಡ ರಾಜ್ಯೋತ್ಸವ ಸಮಿತಿ 'ಹೆಮ್ಮೆಯ ಕನ್ನಡಿಗ' ಸಂಮಾನದೊಂದಿಗೆ ಗೌರವಿಸಿದೆ.

**ಅಬಕಾರೀ ಇಲಾಖೆಯ ಕ್ರೆಡಿಟ್**

ಸೊಸೈಟಿಯಲ್ಲಿ ನಿರಂತರ ಕಾರ್ಯದರ್ಶಿಯಾಗಿ ದುಡಿದ ಅನುಭವ ಹೊಂದಿರುವ ಕಾರಣ, ಬೆಂಗಳೂರಿನ ಹಿರಿಯ ನಾಗರಿಕರ ವೇದಿಕೆಯ ಕೋಶಾಧಿಕಾರಿಯಾಗಿಯೂ ಸತತವಾಗಿ ದುಡಿಯುತ್ತಿದ್ದಾರೆ. ಈ ಪ್ರಕಾರ ಶಿವಮೊಗ್ಗದ ದೊಡ್ಡ ಬ್ರಾಹ್ಮಣರ ಬೀದಿಯಲ್ಲಿದ್ದ ಪಾಟಾಳಿ ಕೃಷ್ಣ ರಾವ್ ಹಾಗೂ ಲಕ್ಷ್ಮಮ್ಮನವರ ಪುತ್ರರಾಗಿ 1943 ಜುಲೈ 24ರಂದು ಜನಿಸಿದ ಶ್ರೀ ಪಿ. ಕೆ. ಜನಾರ್ದನ ರಾವ್ ಇವರು ಪದವಿ ಶಿಕ್ಷಣದ ತರುವಾಯ 1963ರಲ್ಲಿ ಹಾಸನದಲ್ಲಿ ಅಬಕಾರಿ ಇಲಾಖೆಗೆ ಸೇರಿಕೊಂಡರು. ತರುವಾಯ ದಾವಣಗೆರೆ, ಬೆಂಗಳೂರು, ಬೆಳಗಾಂನಲ್ಲಿ ದುಡಿದು 1993ರಲ್ಲಿ ಪುನಃ ಬೆಂಗಳೂರಿಗೆ ಆಗಮಿಸಿ, 2003ರಲ್ಲಿ ನಿವೃತ್ತಿ ಹೊಂದಿದರು. ಸೊಸೈಟಿ ಮತ್ತು ವೇದಿಕೆಗಳ ನಿರಂತರ ಸಾಮಾಜಿಕ ಕ್ಷೇತ್ರದ ಕೆಲಸದಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸಿದ ಬೆಂಗಳೂರಿನ ಅಂತಾರ್‍ರಾಷ್ಟ್ರೀಯ ಬಸವ ಪ್ರತಿಷ್ಠಾನ 2022ರ ಸರ್ವಧರ್ಮ ಸಂಸತ್ತು ಸಮ್ಮೇಳನದಲ್ಲಿ 'ಕಾಯಕರತ್ನ' ಬಿರುದನ್ನು ಇತ್ತು ಸಂಮಾನಿಸಿದೆ.

ಎರ್ಮಾಳು ಕುಟುಂಬದ ಶಾಂತಾರವರನ್ನು 1972 ಮೇ 18ರಂದು ಉಡುಪಿಯ ಶಾರದಾ ಮಂಟಪದಲ್ಲಿ ವಿವಾಹವಾದ ಜನಾರ್ಧನ ರಾವ್‌ರವರು ಬೆಂಗಳೂರಿನ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ಶ್ರೀ ಕಿಶೋರ್ ರಾವ್, ಇಂಜಿನಿಯರ್ ಶ್ರೀ ರಂಜನ್ ರಾವ್, ಪತ್ನಿ ಶಿಕ್ಷಕಿ ಶ್ರೀಮತಿ ಸಂಹಿತಾ, ಮೊಮ್ಮಗಳು ತನ್ವಿಯೊಂದಿಗೆ ಲವಲವಿಕೆಯಿಂದ ಬಾಳುತ್ತಿದ್ದಾರೆ. ಜನಾರ್ಧನ ರಾವ್‌ರವರ ಮಗಳು ಬ್ಯಾಂಕ್ ಉದ್ಯೋಗಿ ಶ್ರೀಮತಿ ಜ್ಯೋತಿ ಎರ್ಮಾಳ್, ಇಂಜಿನಿಯರ್ ಶ್ರೀ ರಾಜೇಶ್ ಇವರನ್ನು ವಿವಾಹವಾಗಿದ್ದು ಅವರೂ ಕೂಡಾ ಬೆಂಗಳೂರಿನಲ್ಲಿಯೇ ಮಗಳು ಅನನ್ಯಳೊಂದಿಗೆ ಸ್ವಂತ ಮನೆಯಲ್ಲಿ ಸುಖದಿಂದಿದ್ದಾರೆ.

ಲೇಖನ : **ರಾಯೀ ರಾಜಕುಮಾರ್, ಮೂಡುಬಿದಿರೆ**

---

**ಪ್ರಕಟಣೆ**

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ (ರಿ.)
## ಜ್ಞಾನಶಕ್ತಿ ಟ್ರಸ್ಟ್ (ರಿ.)

ಜ್ಞಾನಶಕ್ತಿ ನಗರ, ಕೊಡಿಗೇಹಳ್ಳಿ, ಬೆಂಗಳೂರು

**2023-24ನೇ ಸಾಲಿನ**
**ಸಾಲ ವಿದ್ಯಾರ್ಥಿವೇತನ (Loan Scholarship) ಅರ್ಜಿ**

ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರು 2023–24ನೇ ವರ್ಷದ Loan Scholarship ಸಾಲ ವಿದ್ಯಾರ್ಥಿವೇತನಕ್ಕೆ ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗಾಗಿ education.jns@gmail.com ಗೆ ನಿಮ್ಮ ವಿವರಗಳೊಂದಿಗೆ email ಮಾಡಬೇಕಾಗಿ ಕೇಳಿಕೆ. ವಿವರಗಳ ಪರಿಶೀಲನೆಯ ಬಳಿಕ ಅರ್ಜಿಯನ್ನು ಕಳುಹಿಸಲಾಗುವುದು.

**ಅರ್ಹತೆಗಳು ಹಾಗೂ ನಿಯಮಗಳು :**

* ಶಿಕ್ಷಣದ ಅವಧಿಯ ಯಾವುದೇ ವರ್ಷದಲ್ಲೂ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು.
* ವಿದ್ಯಾರ್ಥಿವೇತನ ಶಿಕ್ಷಣದ ಸಂಪೂರ್ಣ ಅವಧಿಗೆ ಉದ್ದೇಶಿತವಾಗಿದ್ದು, ಅದನ್ನು ಸೆಮಿಸ್ಟರ್ ಯಾ ವಾರ್ಷಿಕ ಫಲಿತಾಂಶದ ಆಧಾರದ ಮೇಲೆ ಕಂತುಗಳಲ್ಲಿ ವಿತರಣೆ ಮಾಡಲಾಗುವುದು.
* ವಿದ್ಯಾರ್ಥಿವೇತನವು ಕೋರ್ಸ್ ಪೂರ್ಣಗೊಳ್ಳುವವರೆಗೆ ಬಡ್ಡಿರಹಿತವಾಗಿರುತ್ತದೆ.
* ಪ್ರಚಲಿತವಿರುವ ಹೆಚ್ಚಿನ ಎಲ್ಲಾ ಕೋರ್ಸುಗಳಿಗೆ ವಿದ್ಯಾರ್ಥಿವೇತನ ಲಭ್ಯ.
* ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿ (Merit) ಮತ್ತು ಕುಟುಂಬದ ಒಟ್ಟು ಆದಾಯವನ್ನು ಪರಿಗಣಿಸಲಾಗುತ್ತದೆ.
* ಸೂಕ್ತ ಜಾಮೀನುದಾರರ ಅಗತ್ಯವಿರುತ್ತದೆ.
* **ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 31–8–2023**

***ಶಿಕ್ಷಣ ಸಮಿತಿ, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರು***

---

## ವಿದುಷಿ ರಾಧಾ ಮುರಳೀಧರ್ ಅವರಿಗೆ ಸನ್ಮಾನ



ಇತ್ತೀಚೆಗೆ ಎಡನೀರಿನಲ್ಲಿ ನಡೆದ ರಂಗಚಿನ್ನಾರಿ ಕಾಸರಗೋಡು ಇದರ ಮಹಿಳಾ ಘಟಕ ನಾರಿ ಚಿನ್ನಾರಿ ಆಯೋಜಿಸಿದ ವೈಶಾಖ ಲಹರಿ ಕಾರ್ಯಕ್ರಮದಲ್ಲಿ ಕಾಸರಗೋಡಿನ ಖ್ಯಾತ ಸಂಗೀತ ವಿದುಷಿ ರಾಧಾ ಮುರಳೀಧರರನ್ನು ಎಡನೀರು ಮಠಾಧೀಶ ಪರಮಪೂಜ್ಯ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿಯವರ ಸಮಕ್ಷಮದಲ್ಲಿ ಗೌರವಾರ್ಪಣೆ ಸಲ್ಲಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ವಿದುಷಿ ಉಷಾ ಈಶ್ವರ ಭಟ್, ಶ್ರೀಮತಿ ತಾರಾ ಜಗದೀಶ್, ವಿದುಷಿ ಮಾನಸಿ ಸುಧೀರ್ ಮೊದಲಾದವರು ಉಪಸ್ಥಿತರಿದ್ದರು.

## ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

ಬೆಂಗಳೂರು ನಿವಾಸಿ ನಿವೃತ್ತ ಬಿ.ಎಸ್.ಎನ್.ಎಲ್. ಅಧಿಕಾರಿ ಶ್ರೀಮತಿ ಅರುಂಧತಿ ಯು. ತಮ್ಮ ಪತಿ ಶ್ರೀ ಸೂರ್ಯನಾರಾಯಣ ರಾವ್ ಯು. ಮತ್ತು ಸಹೋದರ ಶ್ರೀ ಕುಮಾರಸ್ವಾಮಿ ಎಂ. ಎಸ್. ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/- (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

❋ ❋ ❋

ಬ್ರಹ್ಮಶ್ರೀ ಕಬ್ಬಿನಾಲೆ ಗುರುಪ್ರಸಾದ್ ಹೆಬ್ಬಾರ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ಹಲವಾರು ಹೊದಿಕೆ, ಶಾಲು, ಮುಂಡು ಮತ್ತು ಟವಲ್‌ಗಳನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ನಾಸಿಕ್‌ನ ಶ್ರೀ ಪಿ. ಎಸ್. ನಾರಾಯಣ ರಾವ್ ಮತ್ತು ಶ್ರೀಮತಿ ವನಜಾ ಸ್ಮರಣಾರ್ಥ ಅವರ ಮಕ್ಕಳಾದ ಶ್ರೀಮತಿ ಅನುಪಮಾ ಬೆಳ್ಳೆ, ಶ್ರೀಮತಿ ಉಷಾ ಪ್ರಸಾದ್, ಶ್ರೀ ರಂಗ ರಾವ್, ಶ್ರೀ ಅಶೋಕ್ ರಾವ್ ಮತ್ತು ಶ್ರೀಮತಿ ಗೀತಾ ವಿಜಯಕುಮಾರ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ 1,00,000 (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.





**3,4,5 & 6 BHK Luxury homes at the heart of Mangalore**

**Live the vacation life!**

Bookings open now
**8882 777 444**

SHIVABAGH
*KADRI*

Land® Trades
BUILDERS & DEVELOPERS
**BUILDING TRUST,DELIVERING VALUE**


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*